**ಸಾಕ್ಷಿಯನ್ನು ದಿಃ *20/02/2026* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ವಕೀಲರಿಂದ.**

ನಾನು ಮುಖ್ಯ ವಿಚಾರಣೆಯಾಗಿ ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿನ ಸಂಗತಿಗಳು ಸತ್ಯವಾಗಿವೆ.

**ಪಾಟೀ ಸವಾಲು ಃ ಶ್ರೀಮತಿ ಆರಎಸಬಿ ವಕೀಲರಿಂದ 2 ನೇ ಎದುರುದಾರರ ಪರವಾಗಿ.**

ಗಾಯಾಳು ನನ್ನ ಹತ್ತಿರ ದಿಃ11-09-2025 ರಂದು ಬಂದಿದ್ದರು. ಸದರಿ ಗಾಯಾಳು ತನ್ನ ಹಿಂದಿನ ಚಿಕಿತ್ಸೆಯ ವಿವರಗಳನ್ನು ತಂದಿದ್ದರು. ಈ ರೀತಿ ಸದರಿಯವರು ಜಿಲ್ಲಾ ಆಸ್ಪತ್ರೆಯವರು ನೀಡಿರುವ ಗಾಯದ ಪ್ರಮಾಣಪತ್ರ ಮತ್ತು ಮಿರಜ ಆಸ್ಪತ್ರೆಯವರು ನೀಡಿರುವ ಡಿಸಚಾರ್ಜ ಸಮರಿಯನ್ನು ತಂದಿರುತ್ತಾರೆ. ನನ್ನ ಪ್ರಮಾಣಪತ್ರದಲ್ಲಿ ಸವದತ್ತಿಯಲ್ಲಿ ಚಿಕಿತ್ಸೆ ಪಡೆದಿರುವ ಕುರಿತ ಬರೆದಿರುವ ಆಧಾರವೆಂದರೆ ಗಾಯಾಳುವಿನ ಹೇಳಿಕೆ. ಸದರಿಯವರು ಎರಡು ದಿನಗಳ ಕಾಲ ಚಿಕಿತ್ಸೆ ಪಡೆದಿದ್ದೇನೆ ಎಂದು ಹೇಳಲಾದ ಕಾರಣ ಆ ವಿಷಯ ಸಂಗತಿ ಉಲ್ಲೇಖ ಮಾಡಿದ್ದೇನೆ. ಈ ವಿಷಯ ಸಂಗತಿ ದಾಖಲೆ ರಹಿತ ಸುಳ್ಳು ಹೇಳಿಕೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಗಾಯದ ಪ್ರಮಾಣಪತ್ರದ ಪ್ರಕಾರ ಎಡಗಾಲಿನ ಟಿಬಿಯಾ ಫ್ಯಾಬುಲಾ ಮೂಳೆ ಮುರಿತ ಆಗಿರುತ್ತದೆ. ಸದರಿ ಜಿಲ್ಲಾ ಆಸ್ಪತ್ರೆಯವರು ಮೂಳೆ ಮುರಿತಕ್ಕೆ ಪ್ಲಾಸ್ಟರ ಹಾಕಿ ಔಷದೋಪಚಾರ ನೀಡಿದ್ದು ಇರುತ್ತದೆ. ನಾನು ಗಾಯಾಳುವಿನ ಅಪಘಾತವಾದ ಕೂಡಲೇ ಪಡೆದುಕೊಂಡಿರುವ ಚಿಕಿತ್ಸೆಯ ದಾಖಲಾತಿ ನೋಡಿಲ್ಲ ಎಂದರೆ ನಿಜ. ಗಾಯಾಳು ನನ್ನ ಹತ್ತಿರ ಅಂಗನ್ಯೂನತೆ ಪ್ರಮಾಣಪತ್ರದ ಸಲುವಾಗಿ ಮತ್ತು ಮುಂದುವರೆದ ಚಿಕಿತ್ಸೆ ಮತ್ತು ಸೂಚನೆ ಸಲುವಾಗಿ ಬಂದಿದ್ದರು. ಗಾಯಾಳುವಿಗೆ ಮುಂದುವರೆದ ಚಿಕಿತ್ಸೆಯ ಅವಶ್ಯಕತೆ ಇಲ್ಲದೇಯಿದ್ದರೂ ಸಹ ಅವಶ್ಯಕತೆಯಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರು ಸದರಿ ದಿನಾಂಕದಂದು ಹೊರತುಪಡಿಸಿ ಮತ್ತೇ ನನ್ನ ಹತ್ತಿರ ಬಂದಿಲ್ಲ ಎಂದರೆ ನಿಜ. ಜಿಲ್ಲಾ ಆಸ್ಪತ್ರೆಯವರು ನೀಡಿರುವ ಚಿಕಿತ್ಸೆಗೆ ಗಾಯಾಳು ಸಂಪೂರ್ಣವಾಗಿ ಗುಣಮುಖವಾಗಿದ್ದರು ಎಂದರೆ ಸರಿಯಲ್ಲ. ಈ ಹೇಳಿಕೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಪ್ರಮಾಣಪತ್ರದಲ್ಲಿ ಗಾಯಾಳುವಿಗೆ ಇನ್ನೂ ತೊಂದರೆಗಳು ಇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿಯವರು ಫಿಜಿಯೋಥೆರಪಿ ಸೂಚನೆ ಮತ್ತು ಮುಂದುವರೆದ ಚಿಕಿತ್ಸೆ ಪಡೆಯಬೇಕೆಂದು ಹೇಳಿರುವ ಸೂಚನೆಗಳು ಅವಶ್ಯಕತೆಯಿಲ್ಲದೆ ಇದ್ದರೂ ಹೇಳಿರುವ ಸುಳ್ಳು ಸಂಗತಿಗಳು ಎಂದರೆ ಸರಿಯಲ್ಲ.

ಅಂಗನ್ಯೂನತೆ ಪ್ರಮಾಣಪತ್ರ ಒದಗಿಸುವಾಗ ನಾನು ಎಡಗಾಲಿನ ಮತ್ತು ದೈಹೀಕ ತಪಾಸಣೆ ಮಾಡಿರುತ್ತೇನೆ. ಸದರಿ ಎಡಗಾಲನ್ನು ಬಲಗಾಲಿನ ಹೋಲಿಸಿ ನ್ಯೂನತಾ ಲೆಕ್ಕಾಚಾರ ಮಾಡಿರುತ್ತೇನೆ. ಈ ರೀತಿ ಯಾವುದೇ ಲೆಕ್ಕಾಚಾರ ಮಾಡದೇ ಹಾಗೇಯೇ ಸುಳ್ಳು ಅಂಕೆಗಳನ್ನು ಹಾಕಿ ಸುಳ್ಳು ನ್ಯೂನತಾ ಪ್ರಮಾಣಪತ್ರ ಒದಗಿಸಿದ್ದು ಇರುತ್ತದೆ ಎಂದರೆ ಸರಿಯಲ್ಲ. ನನ್ನ ಪ್ರಮಾಣಪತ್ರದ 4 ನೇ ಖಂಡಿಕೆಯಲ್ಲಿ ಹೇಳಿರುವ ತೊಂದರೆಗಳನ್ನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ತೊಂದರೆಗಳು ಕೇವಲ ನ್ಯೂನತಾ ಪ್ರಮಾಣಪತ್ರಕ್ಕೆ ಹೋಲುವಂತೆ ತೊಂದರೆಗಳು ಹೊರತು ನಿಜವಾದ ತೊಂದರೆಗಳು ಎಂದರೆ ಸರಿಯಲ್ಲ.

ಗಾಯಾಳುವಿಗೆ ಆಗಿರುವ ಮೂಳೆ ಮುರಿತಗಳು ಜೋಡಣೆಯಾಗಿರುತ್ತವೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಟಿಬಿಯಾ ಮೂಳೆ ಜೋಡಣೆಯಾಗಿರುತ್ತದೆ, ಆದರೆ ಫಿಬುಲಾ ಡೊಂಕಾಗಿ ಜೋಡಣೆಯಾಗಿರುತ್ತದೆ ಎಂದು ಉತ್ತರಿಸುತ್ತಾರೆ. ಈ ರೀತಿ ಡೊಂಕಾಗಿ ಜೋಡಣೆಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ಗಾಯಾಳುವಿಗೆ ಯಾವುದೇ ನ್ಯೂನತೆ ಇರುವುದಿಲ್ಲ ಮತ್ತು ಸದರಿಯವರಿಗೆ ಸಹಾಯ ಮಾಡುವ ದುರುದ್ದೇಶದಿಂದ ಹೆಚ್ಚಿನ ಪ್ರತಿಶತದೊಂದಿಗೆ ಸುಳ್ಳು ಅಂಗನ್ಯೂನತೆ ಪ್ರಮಾಣಪತ್ರ ಒದಗಿಸಿ ಅದರಂತೆ ಸುಳ್ಳು ಸಾಕ್ಷ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನೀಡಿರುವ 28 ನ್ಯೂನತಾ ಪ್ರತಿಶತ ಒಟ್ಟು ಶರೀರಕ್ಕೆ ಹೋಲಿಸಿದರೆ ¼ ಅಂಶ ಆಗುತ್ತದೆ ಎಂದರೆ ಆ ರೀತಿ ಯಾವುದೇ ನಿಯಮಗಳು ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ನಾನು ನೀಡಿರುವ ನ್ಯೂನತಾ ಪತ್ರ ನಿಯಮಗಳನ್ನು ಪಾಲಿಸದೆ ನೀಡಿರುವ ಪ್ರಮಾಣಪತ್ರ ಎಂದರೆ ಸರಿಯಲ್ಲ. ನಾನು ಚಿಕಿತ್ಸೆ ನೀಡದೆ ಇರುವ ಕಾರಣ ನನ್ನ ನ್ಯೂನತಾ ಪ್ರಮಾಣಪತ್ರ ನೀಡುವ ಅಧಿಕಾರವಿಲ್ಲ ಎಂದರೆ ಸರಿಯಲ್ಲ. ಸದರಿ ನ್ಯೂನತೆಯಿಂದ ಗಾಯಾಳುವಿನ ದುಡಿಮೆ ಎಷ್ಟು ಕುಂಠಿತವಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ನಾನು

ಅದನ್ನುಲೆಕ್ಕಿಸಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ಗಾಯಾಳು ಯಾವುದೇ ರೀತಿ ತೊಂದರೆ ಇಲ್ಲದೆ ಮೊದಲಿನಂತೆ ತಮ್ಮ ದೈನಂದಿನ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ.

***ಮರು ವಿಚಾರಣೆ : ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.